ಹಾಗಾಗಬಾರದೇಕೆ ಅಲ್ಲವೇ?

ಹೀಗಿರಲಾಗಿ, ಮೊನ್ನೆ ಏನಾಯ್ತು ಅಂದರೆ, ನಾನು ಯಾವತ್ತು ಅದೇ ಗುಂಗಿನಲ್ಲಿ ಇರುವುದನ್ನು ಗಮನಿಸಿ 'ಯಾವಾಗಲೂ ಏನೋ ವಿಚಾರದಲ್ಲಿ ಇರ್ತೀರಲ್ಲಾ, ಏನ್ ಸಮಾಚಾರ?' ಎಂದು ಅರ್ಧಾಂಗಿ ಕೇಳಿಯೇ ಕೇಳಿದಳು. ಈ ಪ್ರಶ್ನೆ ಎಂದಾದರೂ ಬರುವುದೇ ಎಂದು ಗೊತ್ತಿತ್ತು. ಮನೆಯಲ್ಲಿ ಹೇಳದೇ ಕೇಳದೇ ತಪಸ್ಸಿಗೆ ಹೋಗುವಂತಿಲ್ಲ, ಹಾಗೇ ಹೋದರೆ 'ಗೋಧಿ ಬಣ್ಣ, ಸಾಧಾರಣ ಮೈಕಟ್ಟು' ಎಂದು ಪತ್ರಿಕೆಗಳಲ್ಲಿ ಫೋಟೊಸಹಿತ ಪ್ರಕಟಣೆ ಬರಬಹುದು. ಬಸ್, ರೈಲು ನಿಲ್ದಾಣಗಳಲ್ಲಿ ಭಿತ್ತಿಪತ್ರ ಅಂಟಿಸಬಹುದು. ಹಾಗಾಗಬಾರದೆಂದು ವಿಷಯ ಪ್ರಸ್ತಾಪಿಸಿ ನಾನು ಲೋಕಕಲ್ಯಾಣ ಕುರಿತು ತಪಸ್ಸಿಗೆ ತೆರಳುವ ವಿಚಾರವನ್ನು ನಿಧಾನವಾಗಿ ಆದರೆ ದೃಢಸ್ವರದಲ್ಲಿ ಹೇಳಿದೆ. ವಿಷಯದ ಗಾಂಭೀರ್ಯತೆ ಗೊತ್ತಾಗಿ ಮೊದಲು ಮಡದಿ ನಂತರ ಮಕ್ಕಳು ಚಕಿತಗೊಂಡು 'ಇಷ್ಟ ದಿವಸ ಆರಾಮ ಇದ್ರೆಲ್ಲಾ, ಈಗ ಒಮ್ಮೆಗೆ ಏನಾತು, ಹಿಂಗ್ಯಾಕ ಮಾತಾಡಾಕ ಹತ್ತಿರಿ' ಅಂದ್ರು. 'ಜಗತ್ತಿನ ತುಂಬಾ ಎಲ್ಲಾ ಕಡೆ ಯುದ್ಧ ನಡಾದವು, ಇಸ್ರೇಲ್– ಪ್ಯಾಲಿಸ್ಟೀನ್ ಯುದ್ಧದೊಳಗ ಎಪ್ಪತ್ತ ಎಂಬತ್ತು ಸಾವಿರ ಜನಾ ಸತ್ತಾರು, ಕೂಸ ಕುನ್ನಿ ಸಾಯ್ತಾ ಅದಾರು, ಆ ಜನರ ಸಾವ ನಿಲ್ತಾ ಇಲ್ಲ, ಅವರ ಸಂಕಟ ನೋಡಾಕಾಗ್ತಾ ಇಲ್ಲ, ರಶಿಯಾ– ಉಕ್ರೇನ್ ಯುದ್ಧ ಮೂರು ವರ್ಷ ಆದ್ರೂ ನಿಲ್ತಾ ಇಲ್ಲ, ದೇಶ ಹಾಳಾಗ್ತ ಅದಾವು, ಯಾರಿಗೂ ಯುದ್ಧ ನಿಲ್ಸಾಕ ಆಗ್ತಾ ಇಲ್ಲಾ, ಇನ್ನೂ ಅಷ್ಟ ಕಾರಣಾ ಅದಾವು, ಮನಶಾ ಬಾಳ ಕೆಟ್ಟ ಆಗ್ತಾ ಅದಾನ, ಅದಕ್ಕ ನಾ ತಪಸ್ಸ ಮಾಡಿ ದೇವರಿಗೆನ ಇದೆಲ್ಲಾ ನಿಲ್ಸು, ಸರಿ ಮಾಡು ಅಂತ ಕೇಳ ಬೇಕಂತ ಮಾಡೇನಿ' ಅಂದೆ. ಅದಕ್ಕೆ ನಿರೀಕ್ಷಿಸಿದಂತೆ 'ಊರ ಚಿಂತಿಗೆ ಮುಲ್ಲಾ ಸೊರಗಿದ್ನಂತ, ಅದನೆಲ್ಲಾ ಕಟ್ಕೊಂಡ ಏನ್ ಮಾಡ್ತೀರಿ, ಅದೆಲ್ಲಾ ಆ ದೇವರಿಗೆ ಗೊತ್ತಿಲ್ಲೇನ, ಅವನ ಕಣ್ಣ ಮುಚ್ಕೊಂಡ ಕುಂತಾನ, ನಿಮಗ್ಯಾಕ ಬೇಕು ಜಗತ್ತಿನ ಉಸಾಬರಿ, ತಿಂದುಂಡ ಆರಾಮ ಇರುದು ಬಿಟ್ಟ ಸುಮ್ನ ತಲಿ ಕೆಡಿಸ್ಕೊಂಡ ಕುಂತರಿ, ಇತ್ತಿತ್ತಲಾಗ ಯಾರರೆ ತಪಸ್ಸ ಮಾಡಿ ವರ ಪಡದಾರನ ಜಗತ್ತಿನ್ಯಾಗ, ದೇವರು, ವರ, ತಪಸ್ಸು ಅದೆಲ್ಲ ದ್ವಾಪಾರ ಯುಗದ ಮಾತು, ಈಗ ಕಲಿಗಾಲ ಬಂದ್ಯತಿ, ಅದನ್ನೆಲ್ಲಾ ತಲ್ಯಾಗಿಂದ ತಗದಾಕ್ರಿ, ಆ ಟಿವ್ಹಿ, ಮೊಬೈಲ್ ನೋಡುದು, ಪೇಪರ ಓದುದು ಬಂದ ಮಾಡ್ರಿ ನಿಮ್ಮ ತಲಿ ಸರಿ ಆಗ್ತ್ಯತಿ, ಎಂದೂ ಇಲ್ದ ದೇವರ ಮ್ಯಾಲಿನ ಭಕ್ತಿ ಈಗೆಲ್ಲಿಂದ ಬಂತು ನಿಮಗ?' ಅಂತ ಮಡದಿಯಿಂದ ಜೋರು ಪ್ರತಿಕ್ರಿಯೆ ಬಂತು. ನನ್ನ ತಲಿ, ನನ್ನ ಭಕ್ತಿ ಬಗ್ಗೆಯೇ ಮಡದಿ ಸಂಶಯ ವ್ಯಕ್ತ ಮಾಡಿದಳು. 'ಯಾವುದಾದ್ರು ಛಲೋ ಡಾಕ್ಟರ್‌ಗ ತೋರಿಸ್ಕೊಂಡು ಬರ್ರಿ, ಒಂದ ಹೋಗಿ ಮತ್ತೊಂದು ಆದೀತು' ಅಂತ ಕಾಳಜಿ ಮಾಡಿದಳು.

ಇದೆಲ್ಲಾ ನಿರೀಕ್ಷಿಸಿದ ಪ್ರತಿಕ್ರಿಯೆ ಆಗಿತ್ತು. ಲೋಕಕಲ್ಯಾಣಕ್ಕಾಗಿ ಸಾಂಸಾರಿಕ ಬಂಧನಗಳನ್ನು ಮೀರಬೇಕು, 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಎಂದು ದಾಸರು ಎಲ್ಲವನ್ನೂ ತೊರೆದು ಹರಿಯ ಚರಣದ ಕಡೆಗೆ ವಾಲಿದರು. ನಾನೂ ಹಾಗೆಯೇ ಮಾಡಬೇಕು, ದೇವರನ್ನು ಒಲಿಸಿಕೊಂಡು ವರ ಕೇಳಬೇಕು, ಏನಾದರಾಗಲಿ ಎಂದು ಊಟ ಮಾಡಿ, ಅದೇ ಧ್ಯಾನದಲ್ಲಿ ನಿದ್ರೆ ಹೋದೆ. ಅಂದು ನನಗೆ ಕನಸಿನಲ್ಲಿ ದೇವರು ಪ್ರತ್ಯಕ್ಷನಾಬೇಕೆ!!?. ನಾನು ಯಾವುದೋ ಒಂದು ಮರದ ಕೆಳಗೆ ತಪಸ್ಸು ಮಾಡುತ್ತಾ ಮೈಮರೆತಿದ್ದೇನೆ. ಸುತ್ತಲೂ ಪ್ರಭಾವಳಿ ಇರುವ, ಬಲು ಎತ್ತರದ ಝಗಮಗಿಸುವ ಮಂಗಲಮಯ ಮೂರ್ತಿಯ ಪ್ರಖರ ಬೆಳಕಿನಿಂದ ಕಣ್ಣು ತೆರೆಯಿತು. 'ಈ ವಯಸ್ಸಿನಲ್ಲಿ ಇದೆಲ್ಲಾ ಏಕೆ, ಏನು ಬೇಕು?' ಎಂದಿತು ಆ ದಿವ್ಯಮೂರ್ತಿ ನನಗೆ. ನಾನು ಎಚ್ಚರಗೊಂಡು ಕೈಮುಗಿದು, 'ದೇವಾ, ನನಗೆ ಸ್ವಂತಕ್ಕೆ ಏನೂ ಬೇಕಿಲ್ಲ, ಈ ಜಗತ್ತಿನಲ್ಲಿ ಅಲ್ಲಲ್ಲಿ ಯುದ್ಧಗಳು ನಡೆದು ದಿನಾಲು ಜನ ಹುಳುಗಳಂತೆ ಸಾಯತೊಡಗಿದ್ದಾರೆ, ಆ ಸಾವು– ನೋವುಗಳನ್ನು ನೋಡಲಾಗುತ್ತಿಲ್ಲ, ಜಗತ್ತಿನಲ್ಲಿರುವ ಎಲ್ಲ ಯುದ್ಧೋಪಕರಣಗಳು, ಬಾಂಬು– ಬಂದೂಕುಗಳನ್ನು ಅವು ಇದ್ದಲ್ಲಿಯೇ ನಿಷ್ಕ್ರಿಯಗೊಳಿಸು, ಮದ್ದು– ಗುಂಡುಗಳನ್ನೆಲ್ಲ ಠುಸ್ಸೆನ್ನಿಸು, ಕ್ಷಿಪಣಿಗಳು ಸಿಡಿಯದಂತೆ, ಯುದ್ಧ ವಿಮಾನಗಳು ಹಾರದಂತೆ ಮಾಡು' ಎಂದು ಕೇಳಿದೆ. ಆಗ ದೇವರು: ನನ್ನ ಕಾರ್ಯಕ್ಷೇತ್ರ ಏನಿದ್ದರೂ ಭರತಭೂಮಿ ಮಾತ್ರ. ಬೇರೆ ಕಡೆ ಬೆಳವಣಿಗೆಗಳಲ್ಲಿ ನನಗೆ ಕೈ ಹಾಕಲುಬಾರದು ಎಂದು ಅಂದಿತು.